ಎಂದು ವಿಶ್ವಖ್ಯಾತಿ ಗಳಿಸಿಲ್ಲವೇ? ಪ್ರೊ. ಸಿ.ಎನ್.ಆರ್. ರಾವ್ ಇತ್ಯಾದಿಯವರೆಲ್ಲ ಇಲ್ಲಿಯೇ ಓದಿ ಜಗತ್ತಿನ ಮಟ್ಟದಲ್ಲಿ ಖ್ಯಾತಿ ಗಳಿಸಿಲ್ಲವೇ...?' ಎಂದು ಏನೋ ಹೇಳಲು ಮುಂದಾದರು.

ಅತ್ತಿಗೆ, 'ನಿಮಗೆ ಈಗಿನದೆಲ್ಲ ಗೊತ್ತಾಗುವುದಿಲ್ಲ. ನಿಮ್ಮ ಕಾಲದಲ್ಲಿ ಶಿಕ್ಷಣವೆಂದರೆ ಈಗಿನಷ್ಟು ಚಾಲೆಂಜಿಂಗ್, ಕಾಂಪಿಟೀಟಿವ್ ಆಗಿರಲಿಲ್ಲ. ಏನೋ ಒಂದು ಓದಿದರಾಯಿತು, ಜೀವನ ನಡೆಯುತ್ತಿತ್ತು. ಈಗ ಹಾಗಿಲ್ಲ. ಎಲ್ಲ ಕ್ಷೇತ್ರಗಳಲ್ಲೂ ಚಾಲೆಂಜ್, ಕಾಂಪಿಟೀಷನ್ ಇದೆ. ನಿಮಗೆ ಇದೆಲ್ಲ ಅರ್ಥವಾಗುವುದಿಲ್ಲ. ನಾವು ಒಂದು ಹೆಜ್ಜೆ ಹಿಂದೆ ಉಳಿದರೆ ಜಗತ್ತು ಹತ್ತಲ್ಲ ನೂರು ಹೆಜ್ಜೆ ಮುಂದೆ ಹೋಗಿರುತ್ತದೆ. ಆ ನೂರು ಹೆಜ್ಜೆಗಳನ್ನು ತಲುಪಲು ನಾವು ನಮ್ಮ ಮಗಳಷ್ಟು ತೂಕದ ಹಣವನ್ನು ಚೆಲ್ಲಬೇಕಾಗುತ್ತದೆ. ಇಲ್ಲಿದ್ದು ಅಷ್ಟು ಹೆಜ್ಜೆಗಳನ್ನು ಸಾಗುವುದು ಸಾಧ್ಯವೂ ಇಲ್ಲ ಅಲ್ಲವೇನ್ರಿ' ಎಂದು ಗಂಡನನ್ನು ಕೇಳಿದಳು.

ಆಗ ಅಣ್ಣಯ್ಯ ಏನೋ ಹೇಳಲು ಬಾಯಿ ತೆರೆದ, ಆದರೆ ಅತ್ತಿಗೆ ಅವನ ಮಾತನ್ನು ಅಲ್ಲಿಗೇ ತುಂಡರಿಸಿ, 'ನಾವು ವಾಪಸು ಅಮೆರಿಕಕ್ಕೇ ಹೋಗೋಣ. ಈಗಲೇ ವೈದ್ಯರಲ್ಲಿ ಹೋಗಿ ನಾನು ಈಗ ವಿಮಾನ ಪ್ರಯಾಣ ಮಾಡಬಹುದೇ ಎಂದು ಕೇಳಿಕೊಂಡು ಬರೋಣ' ಎಂದು ಹೇಳಿ ಬಾಯಿ ಮುಚ್ಚಿಸಿದರು. ಎರಡನೇ ಮಗು 'ಗಂಡು' ಅಲ್ಲಿಯೇ ಜನಿಸಿತು. ಆದರೆ ಮಗುವಿನ ನಾಮಕರಣವನ್ನು ಇಲ್ಲಿಯೇ ಮಾಡಲಾಯಿತು.

* * *

'ಅಪ್ಪಯ್ಯ ಮಗನಿಗೆ ವಾಪಸು ಬರಲು ಮತ್ತೆ ಹೇಳಿದರು. ಅಷ್ಟರಲ್ಲಿ ಎರಡನೇ ಮಗ ಎಂಜಿನಿಯರಿಂಗ್ ಮುಗಿಸಿ ಹೆಚ್ಚಿನ ಓದಿಗಾಗಿ ಇಂಗ್ಲೆಂಡಿಗೆ ಹೋಗವುದಾಗಿ ಹೇಳಿದ'.

'ಅಪ್ಪಯ್ಯನಿಗೆ ಆಗಲೇ ತಾನು ಏನು ತಪ್ಪು ಮಾಡಿದೆ ಎಂದು ತಿಳಿದಿದ್ದು. ಮೊದಲ ಮಗನನ್ನು ಓದಲಿಕ್ಕೆಂದು ಕಳಿಸಿ ವಾಪಸು ಕರೆಸಿಕೊಂಡಿದ್ದರೆ ಒಳ್ಳೆಯದಾಗುತ್ತಿತ್ತು. ಆದರೆ, ಮಗನಿಗೆ ಅವನ ಓದಿಗೆ ತಕ್ಕನಾದ ಕೆಲಸ ಸಿಕ್ಕಿ ಅವನೂ ಒಂದಷ್ಟು ದುಡ್ಡು ಮಾಡಿಕೊಂಡು ಬರಲಿ ಎಂದು ಹೇಳಿದ್ದೇ ತಪ್ಪಾಯಿತು. ನಾನು ಹಾಗೆ ಹೇಳುವಾಗ ನನ್ನಲ್ಲಿಯೂ ನನ್ನ ಮಗ ಅಮೆರಿಕದಲ್ಲಿ ಓದಿದವನು, ಅಲ್ಲಿಯೇ ಕೆಲಸಕ್ಕೆ ಸೇರಿದವನು, ಅದೂ ದೊಡ್ಡ ಹುದ್ದೆಗೆ, ಸಮಾಜದಲ್ಲಿ ನಾನೂ ನನ್ನ ಮಗ ಅಮೆರಿಕದಲ್ಲಿ ಇದ್ದಾನೆ, ಅವನಿಗೆ ಅಷ್ಟು ಸಂಬಳವಿದೆ, ದೊಡ್ಡ ಬಂಗಲೆ ಹೊಂದಿದ್ದಾನೆ, ದೊಡ್ಡ ಕಾರು ಖರೀದಿಸಿದ್ದಾನೆ, ಅವನ ಹುದ್ದೆಯಿಂದಾಗಿ ಅಲ್ಲಿನ ಬಿಳಿಯರು ಅವನ ಮುಂದೆ ಡೊಗ್ಗಿ ಸಲಾಮು ಹೊಡೆಯುತ್ತಾರೆ ಎಂದೆಲ್ಲ ಹೇಳಿಕೊಳ್ಳಲು ಆಗುತ್ತದೆ ಎಂಬ ಅಹಂಕಾರ ರೂಪದ ಸ್ವಾರ್ಥ ನನ್ನಲ್ಲಿ ಮೂಡಿತ್ತು ಎನ್ನಿಸುತ್ತದೆ. ಅದು ಅಪ್ಪಯ್ಯನನ್ನು ಇಂದಿಗೂ ಕಾಡುತ್ತಿದೆ'.

* * *

'ಅಪ್ಪಯ್ಯನಿಗೆ ಒಟ್ಟು ಮೂವರು ಗಂಡುಮಕ್ಕಳು ಮತ್ತು ಒಬ್ಬ ಮಗಳು. ಒಬ್ಬರೂ ಜೊತೆಗಿಲ್ಲ. ಎಲ್ಲರೂ ವಿದೇಶದಲ್ಲಿ ಇದ್ದಾರೆ. 25 ವರ್ಷದ ಹಿಂದೆ ದೊಡ್ಡ ಮಗ ಹೋದ, ಇದಾದ ನಾಲ್ಕೈದು ವರ್ಷಗಳ ನಂತರ ಎರಡನೇ ಮಗ ಹೋದ. ಇಬ್ಬರೂ ವೃತ್ತಿಪರ ಕೋರ್ಸ್ ಮಾಡಿದವರಾಗಿದ್ದರು. ಹಾಗಾಗಿಯೇ ಮೂರನೇಯವನನ್ನು ಅಪ್ಪಯ್ಯ ವೃತ್ತಿಪರ ಕೋರ್ಸ್‌ಗೆ ಸೇರಿಸಲಿಲ್ಲ. ಮಾನವಿಕ ವಿಭಾಗದ ಕೋರ್ಸ್‌ಗೆ ಸೇರಲು ಹೇಳಿ ಓದಿಸಿದರು. ಅವನೂ ಅಪ್ಪಯ್ಯನ ಮಾತನ್ನು ಕೇಳಿ ಸೋಷಿಯಲ್ ಸೈನ್ಸ್‌ನಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದ. ಇವನು ಮುಗಿಸಿದ ವಿಭಾಗದ ವಿಶೇಷತೆಯ ಕಾರಣವೋ, ಅಪ್ಪಯ್ಯನ ದುರದೃಷ್ಟವೋ ಅವನಿಗೂ ವಿದೇಶದಲ್ಲಿ, ಅದರಲ್ಲೂ ಆಸ್ಟ್ರೇಲಿಯಾದಲ್ಲಿ ಕೆಲಸ ಸಿಕ್ಕಿತು. ಅವನೂ ವಿದೇಶಕ್ಕೆ ಹಾರಿದ. ಅಪ್ಪಯ್ಯ ಇಲ್ಲಿಯೇ ಎಲ್ಲಿಯಾದರೂ ಖಾಸಗಿ ಸಂಸ್ಥೆಯಲ್ಲಿ ಕೆಲಸ ಸಿಕ್ಕುತ್ತದೋ ನೋಡು, ಇದೇ ಊರಲ್ಲದಿದ್ದರೂ ಈ ದೇಶದ ಯಾವುದೋ ಮೂಲೆಯಲ್ಲಿಯಾದರೂ ಸರಿ. ದೇಶದಲ್ಲಿಯೇ ಇದ್ದೀಯಾ ಎಂಬ ನೆಮ್ಮದಿ ನಮಗಿರುತ್ತದೆ ಎಂದು ಹೇಳಿದರು. ಆದರೆ ಇಲ್ಲಿನ ಸಂಸ್ಥೆಗಳಲ್ಲಿ ಅವನು ನಿರೀಕ್ಷಿಸಿದ ಸ್ಥಾನ, ನಿರೀಕ್ಷಿಸಿದಷ್ಟು ವೇತನ ಸಿಕ್ಕಲಿಲ್ಲ. ಅದೇ ಸಮಯಕ್ಕೆ ಆಸ್ಟ್ರೇಲಿಯಾದ ಸಂಸ್ಥೆಯೊಂದು ಇವನ ಓದಿಗೆ ತಕ್ಕುದಾದ ಹುದ್ದೆಯನ್ನು ನೀಡಿ ಹೆಚ್ಚಿನ ವೇತನ ನೀಡಲು ಮುಂದೆ ಬಂತು. ಇವನೂ ವಿಮಾನ ಏರಿದ'.

'ಮಗಳಾದರೂ ಹತ್ತಿರವಿರಲಿ ಎಂದು ಇಲ್ಲಿಯೇ